**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ, ನ್ಯಾಯಾಲಯದಲ್ಲಿ**

**ಸಿಸಿ ನಂ. 111/2026**

**ಕರ್ನಾಟಕ ಸರ್ಕಾರದ ( ಸಂತೆಬೆನ್ನೂರು ಪೊಲೀಸ್ ಠಾಣೆ )**

**ವಿರುದ್ಧ**

**ಆರೋಪಿ :** ನಾಗರಾಜ್ ಎಂ.ಎಸ್ ಬಿನ್ ಶಿವಪ್ಪ
ವಯಸ್ಸುಃ 45 ವರ್ಷ
ವಾಸಃ ಉಪನಾಯಕನಹಳ್ಳಿ ಗ್ರಾಮ,
ಚನ್ನಗಿರಿ ತಾಲ್ಲೂಕು,
ದಾವಣಗೆರೆ ಜಿಲ್ಲೆ.

**ನಾನು ಶ್ರೀಮತಿ ಮಹಾಲಕ್ಷ್ಮೀ ಜಿ, 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ, ಈ ಮೇಲ್ಕಂಡ ಆರೋಪಿಗಳಾದ ನೀವು ಈ ಕೆಳಕಂಡ ಆಪಾದನೆಗೆ ಗುರಿಪಡಿಸುತ್ತೇನೆ.**

**ಆಪಾದನೆ**

ಮೊದಲನೆಯದಾಗಿ ದಿನಾಂಕಃ 31-10-2025 ರಂದು ಮಧ್ಯಾಹ್ನ 1-30 ಗಂಟೆಯ ಸಮಯದಲ್ಲಿ ಚನ್ನಗಿರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ತಣಿಗೆರೆ ಗ್ರಾಮದಲ್ಲಿನ ಉಪನಾಯಕನಹಳ್ಳಿ ಕ್ರಾಸ್ ನ ದಾವಣಗೆರೆ-ಸಂತೆಬೆನ್ನೂರು ರಸ್ತೆಯಲ್ಲಿ ಆರೋಪಿಯು ಚಾಸಾ-10 ರವರ ಮಾಲೀಕತ್ವದ ಕೆಎ-17/ಟಿಎಫ್-3892 ನೇ ನೋಂದಣಿ ಸಂಖ್ಯೆಯ ಟ್ರ್ಯಾಕ್ಟರ್ ಉಪನಾಯಕನಹಳ್ಳಿ ಕಡೆಯಿಂದ ತಣಿಗೆರೆ ಗ್ರಾಮದ ದಾವಣಗೆರೆ -ಸಂತೆಬೆನ್ನೂರು ಮುಖ್ಯ ರಸ್ತೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ-2 ರವರ ಮಾಲೀಕತ್ವದ ಕೆಎ-17/ಹೆಚ್ ಎಸ್ -3411 ನೇ ಬೈಕನ್ನು ದಾವಣಗೆರೆ ಕಡೆಯಿಂದ ಸಂತೆಬೆನ್ನೂರು ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ-2 ರವರಿಗೆ ಡಿಕ್ಕಿಪಡಿಸಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ. 281 ರಂತೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ ?

2. ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಅತಿವೇಗ ಮತ್ತು ಅಜಾಗರೂಕತೆಯಿಂದ ಮೇಲೆ ಹೇಳಿದ ಸದರಿ ವಾಹನದಲ್ಲಿ ಚಾಲನೆ ಮಾಡಿಕೊಂಡು ಡಿಕ್ಕಿಪಡಿಸಿ

ಅಪಘಾತಪಡಿಸಿದ ಪರಿಣಾಮವಾಗಿ ಚಾಸಾ-2 ರವರ ಹೊಟ್ಟೆಗೆ, ಮೈಕೈಗೆ ಹಾಗೂ ಎಡಗಾಲಿಗೆ ಪೆಟ್ಟು ಬಿದ್ದು, ತೀವ್ರ ಸ್ವರೂಪದ ಹಾಗೂ ಸಾದಾ ಸ್ವರೂಪದ ಗಾಯಗಳಾದ ಕಾರಣ ನೀನು ಭಾರತೀಯ ನ್ಯಾಯಾ ಸಂಹಿತೆ ಕಲಂ 125(b) ರಂತೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ ?

Sd/-

ಸ್ಥಳಃ ಚನ್ನಗಿರಿ
ದಿನಾಂಕಃ 01-04-2026.

C/C 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ ಎಂ ಎಫ್ ಸಿ ನ್ಯಾಯಾಲಯ, ಚನ್ನಗಿರಿ.